# ಚುಕ್ಕಿ ಚಂದ್ರ

■ ನರಸಿಂಹಾರೆಡ್ಡಿ ಯಂಕಾಮೋಳ, ಸೇಡಂ
ಕಲೆ: ಸಂತೋಷ್ ಸಸಿಹಿತ್ಲು

ಅಣ್ಣ ನೋಡು
ಮೋಡ ನಡುವೆ
ಚಂದ್ರನು ಮರೆಯಾದನು

ತಮ್ಮ ತಾಳು
ಮೋಡ ಸರಿಸಿ
ಓಡುತಾ ತಾ ಬರುವನು

ಅಣ್ಣ ನೋಡು
ಚುಕ್ಕಿ ನಡುವೆ
ಎಷ್ಟು ದೂರ ಇರುವುದು

ದೂರವಿದ್ದರೂ
ಕಾಂತಿ ಸೂಸಿ
ಒಂದೇ ರೀತಿ ಹೊಳೆವವು

ಅಣ್ಣ ನೋಡು
ಚಂದ್ರ ಯಾಕೆ
ಅರ್ಧ ಮಾತ್ರ ಇರುವನು

ದಿನವು ನಿನಗೆ
ಹೊಸತು ಕಾಣಲು
ಬೆಳಕು ಬದಿಗೆ ಸರಿವನು

ಬಾನ ದಾರಿಯು
ದೂರ ದೂರ
ಬೀಳದೆ ಹೇಗೆ ಇರುವವು

ನಿಲ್ಲುವ ಧೈರ್ಯ
ಜೊತೆ ಇರಲು
ಸಾಧ್ಯವೆಂದು ತಿಳಿಸುವವು







**ಹರ್ಷಿತಾ ಬಿ.ಎಸ್.**
8ನೇ ತರಗತಿ, ಮೊರಾರ್ಜಿ ದೇಸಾಯಿ ವಸತಿ ಶಾಲೆ,
ಬ್ಯಾಡರಹಳ್ಳಿ



**ಅವನಿ ಜಯರಾಮ್**
5ನೇ ತರಗತಿ, ಗೋಲ್ಡ್‌ಕ್ರೆಸ್ಟ್ ಹೈಸ್ಕೂಲ್, ನವಿ ಮುಂಬೈ

